ಶ್ರೀ ಪಿ. ಆರ್. ರಾಮಯ್ಯ.—ಈ ಸಂಬಂಧವಾಗಿ ಇಂಡಿಯಾ ಸರ್ಕಾರದಿಂದ ಇದು ಸರಿಯಾಗಿ ವರ್ಷ ವರ್ಷವೂ ನಡೆಯಬೇಕೆಂದು ನಮ್ಮ ಸರ್ಕಾರಕ್ಕೆ ಸೂಚನೆ ಬಂದಿದೆಯೆ ?

ಶ್ರೀ ಟಿ. ಚನ್ನಯ್ಯ.—ಹಿಂದೆ ಸೂಚನೆ ಕೊಟ್ಟಿದ್ದರು; ಅದರ ಪ್ರಕಾರ ಸರ್ಕಾರದವರೂ ಕೂಡ ರವೆನ್ಯೂ ಇರಾಖೆ, ಫಾರೆಸ್ಟ್ ಇರಾಖೆ ಮತ್ತು ಇತರ ಇರಾಖೆಗಳಿಂದ ಈ ಕೆಲಸವನ್ನು ಪ್ರತಿ ವರ್ಷವೂ ಕೈಕೊಳ್ಳುತ್ತಿದ್ದರು. ಅನೇಕ ಗಿಡಗಳು ಬದುಕಿವೆ. ಇವುಗಳ ಬಗ್ಗೆ ಅಂಕಿ ಅಂಶಗಳನ್ನು ಕೊಟ್ಟಿದೆ.

ಶ್ರೀ ಪಿ. ಆರ್. ರಾಮಯ್ಯ.—ಪ್ರತಿವರ್ಷವೂ ನಡೆಯಬೇಕೆಂದು ಇಂಡಿಯಾ ಸರ್ಕಾರದವರು ಸೂಚನೆ ಕೊಟ್ಟರೆ ಅದರಂತೆ ನಡೆಸುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಉತ್ಸವ ಮಾಡಲೇಬೇಕೆಂಬ ಖಚಿತವಾದ ಅಭಿಪ್ರಾಯವಿಲ್ಲ. ಮುಖ್ಯವಾಗಿ ಗಿಡಗಳನ್ನು ಪ್ರತಿವರ್ಷವೂ ಬೆಳೆಸುವಂತೆ ಮಾಡಬೇಕೆಂದು ಹೇಳುವುದು ಸಹಜ. ಸಂಬಂಧಪಟ್ಟ ಅಧಿಕಾರಿಗಳು ಕಾರ್ಯಕ್ರಮ ತೆಗೆದುಕೊಂಡು ಪ್ರತಿ ವರ್ಷವೂ ನಡೆಸುತ್ತಿದ್ದಾರೆ. ಎಷ್ಟೋ ಗಿಡಗಳು ಬೆಳೆದು ಚೆನ್ನಾಗಿವೆ.

ಶ್ರೀ ಪಿ. ಆರ್. ರಾಮಯ್ಯ.—ದೇಶಾಭ್ಯುದಯ ಕಾರ್ಯಗಳಲ್ಲಿ ಮರಗಳನ್ನು ಬೆಳೆಸುವುದು, ತೋಪುಗಳನ್ನು ಬೆಳೆಸುವುದು, ಗಿಡಗಳನ್ನು ನೆಡುವುದು ಮುಖ್ಯ ಕಾರ್ಯವಲ್ಲವೆ ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಡಿ. ದೇವರಾಜ ಅರಸ್.—ನೆಟ್ಟಿರುವ ಗಿಡಗಳಲ್ಲಿ ಅರ್ಧಕ್ಕಿಂತ ಹೆಚ್ಚು ಹಾಳಾಗಿರುವುದಕ್ಕೆ ಕಾರಣವೇನು ?

ಶ್ರೀ ಟಿ. ಚನ್ನಯ್ಯ.—ಕಾಲ ಕಾಲಕ್ಕೆ ಮಳೆ ಬಾರದಿರುವುದು ಮುಖ್ಯ ಕಾರಣ. ಸರಿಯಾಗಿ ನೋಡಿಕೊಳ್ಳದೇಯಿರುವುದೂ ಒಂದು ಕಾರಣ, ಈ ಕಾರಣಗಳಿಂದ ಕೆಲವು ಗಿಡಗಳು ನಷ್ಟವಾಗಿವೆ.

ಶ್ರೀ ಡಿ. ದೇವರಾಜ ಅರಸ್.—ನೆಟ್ಟ ಗಿಡಗಳನ್ನು ಪೋಷಣೆಮಾಡುವ ಕೆಲಸವನ್ನು ಯಾರಿಗೆ ನೇಮಿಸಿದ್ದೀರಿ ?

ಅಧ್ಯಕ್ಷರು.—ಆಗಲೇ ಹೇಳಿದರು.

ಶ್ರೀ ಎಸ್. ಕರಿಯಪ್ಪ.—ನೆಟ್ಟ ಗಿಡಗಳಲ್ಲಿ ಶೇಕಡ 10ರಷ್ಟು ಉಳಿದರೂ ಸಾಕೆಂಬುದು ನಿಪುಣರ ಅಭಿಪ್ರಾಯವಲ್ಲವೆ ?

ಅಧ್ಯಕ್ಷರು.—ನೂರಾರು ಶೇಕಡ 50ರಷ್ಟು ಉಳಿದಿವೆಯೆಂದು ಹೇಳಿದ್ದಾರೆ. Your question does not arise in view of this answer.

Licensing of Hotels in the State.

Q.—231. Sri T. HANUMAIAH (Hiriyur—Scheduled Castes).—

Will the Government be pleased to state :—

(*a*) the total number of hotel license-holders in the State (district-war) ;

(*b*) the minimum and maximum license fee for the hotels in the State ;

(*c*) which are the hotels that are auctioned in public in the State—the names of the hotels with the bid amounts for the last five years may be furnished ?

A.—Sri T. CHANNIAH (Minister for Public Health and Local Self-Government).—

(*a*)—

	Districts		*No.*
1	Kolar	..	356
2	Mandya	..	219
3	Shimoga	..	287
4	Tumkur	..	338
5	Chikmagalur	..	261
6	Chitaldrug	..	278
7	Bangalore	..	972
8	Hassan	..	255
9	Mysore	..	559
	Total	..	3,525

(*b*)—

	Minimum	*Maximum*
	Rs.	Rs.
Corporation of the City of Bangalore	10	200
Mysore City Municipality ..	25	500

	Districts	*Minimum*	*Maximum*
		Rs.	Rs.
1	Kolar ..	3	40
2	Mandya ..	5	100
3	Shimoga ..	5	20
4	Tumkur ..	5	50
5	Chikmagalur ..	3	100
6	Chitaldrug ..	5	200
7	Bangalore ..	5	50
8	Hassan ..	1-8-0	30
9	Mysore minimum not furnished ..		100

Statement appended (*vide* appendix)

(*c*) Nil.

Bus Terminus Hotel Building has been leased for the past 5 years as follows :—

Rs. 560 per mensem up to 3rd December 1950.

Rs. 901 per mensem from 3rd December 1950 to 1st January 1953.

Rs. 701 per mensem from 1st January 1953.

	District	Bid amounts for the years 1948–49	1949–50	1950–51	1951–52	1952–53
		Rs.	Rs.	Rs.	Rs.	Rs.
1	Kolar District	.. Information is being collected.				
2	Mandya District.—					
	(a) Maddur Bus Stand	.. ..	..	..	..	Leased out for Rs. 84 p.m. for 5 years.
	(b) Srirangapatna*	.. ..	..	..	..	*Rs. 100 (1953–54).
	(c) Krishnarajapet	.. ..	..	1,520	1,520	1,520
	(d) Nagamangala	.. ..	..	..	Rs. 66 per mensem for 5 (five) years from 1951-52.	
	(e) Mandya	.. ..	182	400	390	250
	(f) Mandya District Office	.. ..	125	212	212	212
	Shimoga District	.. There are no such hotels.				
4	Tumkur District—					
	(a) Tumkur Bus Stand	.. ..	60	60 p.m.	60 p.m.	60 p.m. 440
	(b) Tumkur Court Restaurant	.. ..	..	141	141	176 141
	(c) Tiptur Bus Stand	.. Ground rent at Rs. 180 per month.				
5	Chikmagalur District—					
	(a) Chikmagalur Bus Stand	..	..	..	..	125
	(b) Kadur do	.. ..	126 8 0	134 2 8 p.m.	110	125 6 8 p.m.
	(c) Birur do	.. From 1-12-1950 to 1-12-1951 Rs. 2,600 for 2 years and from 1-1-1952 to 30-11-1953 to Rs. 1,050 p.a.				
	(d) Ajjampur	.. ..	..	..	Rs. 30 p.m. as rent from last two years.	
	(e) Mudigere do	.. 40 p.m.	40 p.m.	40 p.m.	50 p.m.	151 p.m.
6	Chitaldrug—					
	(a) Chitaldrug Bus Stand	.. 580	851	851	851	1,225
	(b) Challakere do	.. 815	1,555	1,555	1,555	1,555
7	Bangalore	.. Nil	Nil	Nil	Nil	Nil
8	Hassan District—					
	(a) Modern Cafe Bus Stand	.. 100 from last year				
	(b) District Office Hotel	.. ..	30	35	85	100
	(c) Saklespur Bus Stand	.. ..	115	215	240	195
	(d) Channarayapatna Bus Stand	.. ..	72	72	72	57
9	Mysore District	.. None	None	None	None	None

ಶ್ರೀ ಟಿ. ಹನುಮಯ್ಯ.—ಒಂದೂವರೆ ರೂಪಾಯಿ ಕನಿಷ್ಠ ಪರಿಮಿತಿ, 200 ರೂಪಾಯಿ ಪರಮಾವಧಿ, ಇಷ್ಟು ವ್ಯತ್ಯಾಸವಿರುವುದೇಕೆ ?

ಶ್ರೀ ಟಿ. ಚೆನ್ನಯ್ಯ.—ಆಯಾ ಸ್ಥಳದ ಸನ್ನಿವೇಶಗಳನ್ನು ನೋಡಿಕೊಂಡು ಅದರಮೇಲೆ minimum and maximum fee ಗೊತ್ತುಮಾಡಲಾಗುತ್ತಿದೆ.

ಶ್ರೀ ಟಿ. ಹನುಮಯ್ಯ.—ಇಷ್ಟೇ ಹೋಟೆಲುಗಳಿರಬೇಕೆಂದು ಅವುಗಳ ಸಂಖ್ಯೆಯನ್ನು ಮಿತಿಗೊಳಿಸುವುದಕ್ಕೆ ಸಾಧ್ಯವೆ ?

ಶ್ರೀ ಟಿ. ಚೆನ್ನಯ್ಯ.—ಸಾಧ್ಯವಿಲ್ಲ.

ಶ್ರೀ ಟಿ. ಹನುಮಯ್ಯ.—ಪರಿಶಿಷ್ಟದಲ್ಲಿ ಹರಾಜಿನ ಮೂಲಕ ಇಷ್ಟಿಷ್ಟು ಹಣ ಬರುತ್ತದೆಂದು ತಿಳಿಸಲಾಗಿದೆ; ಎಲ್ಲಾ ಕಡೆಯೂ ಹೀಗೆಯೇ ಹರಾಜುಮಾಡಿದರೆ ಸರ್ಕಾರಕ್ಕೆ ಹೆಚ್ಚು ಆದಾಯ ಬರುವುದಿಲ್ಲವೆ ?

ಶ್ರೀ ಟಿ. ಚೆನ್ನಯ್ಯ.—It is one of the suggestions to be welcomed. ಅಲ್ಲದೆ ಆಯಾ ಸ್ಥಳದ ಪರಿಸ್ಥಿತಿಯನ್ನು ಅವಲಂಬಿಸಿರುತ್ತದೆ. ಸಾಮಾನ್ಯವಾಗಿ ಬಸ್ ಸ್ಟಾಂಡ್‌ಗಳಲ್ಲಿರುವ ಹೋಟೆಲುಗಳನ್ನು ಹರಾಜು ಮೂಲಕ ಏಲೇ ಮಾಡಲಾಗುತ್ತಿದೆ.

ಶ್ರೀ ಟಿ. ಹನುಮಯ್ಯ.—ಬಸ್ ಸ್ಟಾಂಡುಗಳಲ್ಲಿರುವ ಹೋಟೇಲುಗಳನ್ನು ಹಾಗೂ ಡಿಸ್ಪೆನ್ಸರಿ, ಆಫೀಸುಗಳಲ್ಲಿರುವ ಹೋಟೆಲುಗಳನ್ನೂ ಹರಾಜುಮಾಡಿದರೆ ಸರ್ಕಾರಕ್ಕೆ ಹೆಚ್ಚು ಹಣ ಬರುತ್ತದಲ್ಲವೆ ?

ಶ್ರೀ ಟಿ. ಚನ್ನಯ್ಯ.—ಸರ್ಕಾರಿ ಕಟ್ಟಡಗಳಲ್ಲಿರುವ ಹೊಟೇಲುಗಳಿಂದ ಬರುವ ಹಣ ಮಾತ್ರ ಸರ್ಕಾರಕ್ಕೆ ಬರುತ್ತದೆ. ಉಳಿದ ಹೊಟೇಲುಗಳಿಂದ ಬರುವುದು ಡಿಸ್ಪೆನ್ಸರಿ ಬೋರ್ಡ್ ಅಥವಾ ಮುನಿಸಿಪಾಲಿಟಿಗಳಿಗೆ ಹೋಗುತ್ತದೆ.

ಶ್ರೀ ಮುಲ್ಕಾ ಗೋವಿಂದರೆಡ್ಡಿ.—ಹೊಟೇಲುಗಳನ್ನು ಹರಾಜುಮಾಡುವುದನ್ನು ಸರ್ಕಾರದವರು ವೆರ್-ಕಂ ಮಾಡುತ್ತೇವೆಂದು ಹೇಳಿರಲಿಲ್ಲವೇ ?

Mr. SPEAKER.—It is one of the suggestions.

ಶ್ರೀ ವಿ. ಮುನಿಯಪ್ಪ.—ಕಳೆದ ಅಧಿವೇಶನದಲ್ಲಿ ಹೊಟೇಲುಗಳಿಂದ ಬರತಕ್ಕ ವರಮಾನವನ್ನು ಹೆಚ್ಚಿಸಲು ಆಲೋಚನೆ ಮಾಡುತ್ತಿರುವುದಾಗಿ ತಾವು ತಿಳಿಸಿರಲಿಲ್ಲವೇ ?

Sri T. CHANNIAH.—We are considering that question.

ಶ್ರೀ ವಿ. ಮಸಿಯಪ್ಪ.—ಈಗಾಗಲೇ ತಾವು ಆ ಬಗ್ಗೆ ಏನಾದರೊಂದು ತೀರ್ಮಾನಕ್ಕೆ ಬಂದಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಆ ವಿಚಾರವನ್ನು ಪರ್ಯಾಲೋಚನೆಮಾಡುತ್ತಿದ್ದೇವೆ.

Sri S. SRINIVASA IYENGAR.—Is not hotel licensing fee a municipal revenue ?

Sri T. CHANNIAH.—Yes.

ಶ್ರೀ ಟಿ. ಸಿ. ಬಸಪ್ಪ.—ಲೈಸೆನ್ಸ್ ಇಲ್ಲದಂಥ ಹೊಟೇಲುಗಳು ಸಂಸ್ಥಾನಾದ್ಯಂತ ಎಷ್ಟಿವೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ನಮ್ಮ ಗಮನಕ್ಕೆ ಬಂದಿಲ್ಲ. ಲೈಸನ್ಸ್ ತೆಗೆದುಕೊಳ್ಳದೆ ಹಾಗೆ ಎಲ್ಲಿಯಾದರೂ ಹೊಟೇಲುಗಳನ್ನು ನಡೆಸುತ್ತಿರುವ ಸಮಾಚಾರವನ್ನು ಮಾನ್ಯ ಸದಸ್ಯರು ಸರ್ಕಾರದವರ ಗಮನಕ್ಕೆ ತಂದರೆ ಆ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಕೊಳ್ಳುತ್ತೇವೆ.

ಶ್ರೀ ಟಿ. ಸಿ. ಬಸಪ್ಪ.—ಅಂಥ ಲೈಸನ್ಸ್ ಇಲ್ಲದ ಹೋಟಲುಗಳು ಪ್ರತಿಯೊಂದು ಜಿಲ್ಲೆಯಲ್ಲೂ ಎಷ್ಟೆಷ್ಟಿರುತ್ತವೆಂಬುದನ್ನು ತಿಳಿಸುತ್ತೀರಾ ?

ಶ್ರೀ ಟಿ. ಚನ್ನಯ್ಯ.—ನಮ್ಮ ಗಮನಕ್ಕೆ ಬಂದಿಲ್ಲ. ತಮಗೆ ಗೊತ್ತಿದ್ದರೆ ತಿಳಿಸಬಹುದು.

ಶ್ರೀ ಬಿ. ಟಿ. ಕೆಂಪರಾಜ್.—ಈ ಹೊಟೇಲುಗಳ ಸಂಖ್ಯೆಯನ್ನು ಕಮ್ಮಿಮಾಡುವುದಕ್ಕೆ ಏನಾದರೂ ಸ್ಕೀಮು ಇದೆಯೇ ?

ಶ್ರೀ ಟಿ. ಚನ್ನಯ್ಯ.—ಇದೆ.

ಶ್ರೀ ಬಿ. ಟಿ. ಕೆಂಪರಾಜ್.—ಅದನ್ನು ಜಾರಿಗೆ ತಂದಿದ್ದೀರಾ ?

Sri T. CHANNIAH.—We have given effect to the scheme and restricted the number of hotels.

Sri B. T. KEMPARAJ.—So, how many hotels have been removed as a result of giving effect to this scheme ?

Sri T. CHANNIAH.—Notice.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಬೆಂಗಳೂರಿನಲ್ಲಿರ ತಕ್ಕ ಹೊಟೇಲುಗಳಲ್ಲಿ ಒಂದೊಂದು ರೂಮಿನಲ್ಲಿಯೂ ಎಷ್ಟೆಷ್ಟು ಉಕಾಮಡೇಷನ್ ಇರಬೇಕು, ಪ್ರತಿಯೊಂದು ರೂಮಿಗೂ ಅದಕ್ಕೆ ಸೇರಿರತಕ್ಕಂಥ ಒಂದೊಂದು ಬಾತ್ ರೂಮ್ ಇದೆಯೇ ಎಂಬ ಬಗ್ಗೆ ಏನಾದರೂ ಒಂದು ಕ್ರಮವಿರಬೇಕಲ್ಲವೇ ?

ಶ್ರೀ ಟಿ. ಚನ್ನಯ್ಯ.—ಅವುಗಳನ್ನೆಲ್ಲಾ ಪರಿಶೀಲನೆ ಮಾಡಿಯೇ ಕಾರ್ಪೊರೇಷನ್ನಿನವರು ಅದಕ್ಕೆ ಲೈಸನ್ಸ್ ಕೊಡುವುದು.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಸ್ಯಾನಿಟೇಷನ್ ಬಗ್ಗೆ ಏನಾದರೂ ರೂಲ್ಸುರೆಗ್ಯುಲೇಷನ್‌ಗಳು ಇವೆಯೇ?

ಶ್ರೀ ಟಿ. ಚನ್ನಯ್ಯ.—ಅವುಗಳನ್ನೆಲ್ಲಾ ಪರಿಶೀಲನೆ ಮಾಡಿದನಂತರವೇ ಲೈಸನ್ಸನು ಕೊಡುವುದು.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಆ ರೀತಿ ತಾವು ಚೆಕ್‌ಮಾಡ್ತಿನೋಡಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಬೆಂಗಳೂರು ಕಾರ್ಪೊರೇಷನ್ನಿನ ಹೆಲ್ತ್ ಆಫೀಸರೂ ಮತ್ತು ಅವರ ಸಿಬ್ಬಂದಿಯೂ ಆಗಾಗ್ಗೆ ಹೋಗಿ ನೋಡಿ, ಇನ್‌ಸ್ಪೆಕ್ಷನ್ ಮಾಡಿ, ಅವರ ರಿಮಾರ್ಕ್ಸ್‌ಗಳನ್ನು note ಮಾಡುತ್ತಾರೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಮಾನ್ಯ ಸುಂತ್ರಿಗಳು ತಾವೇನಾದರೂ ಯಾವಾಗಲಾದರೂ ಹೋಗಿ ನೋಡಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಹೋಗಿದ್ದೇನೆ, ನೋಡಿದ್ದೇನೆ.

ಶ್ರೀ ಬಿ ವಿ. ನಾರಾಯಣರೆಡ್ಡಿ.—ಹಾಗೆ ಅಕ್ರಮಗಳಿದ್ದಕಡೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ರೂಲ್ಸು ಪ್ರಕಾರ ನಡೆಯದೆ ಇದ್ದ ಕಡೆ action ತೆಗೆದುಕೊಳ್ಳಲಾಗಿದೆ.

Formation of inter-village roads in Magadi Taluk.

Q.—339. Sri S. SIDDAPPA (Magadi).—

Will the Government be pleased to state :—

(*a*) whether they would provide an inter-village road from Hejjala in Magadi Taluk so as to link up the Thippagondanahalli road *via* Dodderi;

(*b*) whether they would continue the work of the incomplete road joining the high road at Solur *via* Magadi and Thaggikuppe ;

(*c*) whether they would construct a road from 41st mile stone in Bangalore-Mangalore road to Sankighatta ?

A.—Sri T. CHANNIAH (Minister for Public Health and Local Self-Government).—

(*a*) This has to be examined by the District Board as the formation of such roads is their obligatory duty.

(*b*) This is also a matter for the District Board to consider.

(*c*) This road is transferred to the District Board with effect from 20th October 1952. Further action has to be taken by them.

ಶ್ರೀ ಎಸ್. ಸಿದ್ದಪ್ಪ.—ನನ್ನ ಪ್ರಶ್ನೆಗೆ ಜಿಲ್ಲಾ ಬೋರ್ಡಿನವರು ಕಾರ್ಯಕ್ರಮಗಳನ್ನು ಕೈಕೊಳ್ಳಬೇಕಾಗಿರುತ್ತದೆಂದು ಉತ್ತರಕೊಡೋಣವಾಗಿದೆ. ಸರ್ಕಾರದವರು ಮಾಡಿಸುತ್ತಾರೆಂದು ಹೇಳಿದ್ದೀರಿ. ಅವುಗಳನ್ನು ಯಾವಾಗ ಪೂರ್ತಿಮಾಡುತ್ತೀರಿ ?